ಶ್ರೀ ಎಂ. ಶೀರ್ನಾಳಿ ಚಂದ್ರಶೇಖರ್.—ಕ್ರೈಸ್ತ ಸಂಸ್ಥೆಯವರು ಅಲ್ಲಿ ಪ್ರೌಢ ಶಾಲೆಯೊಂದನ್ನು ಕಟ್ಟಲು ಜಾಗ ಕೇಳುತ್ತಿದ್ದಾರೆ. ಅಲ್ಲಿ ಜಾಗ ಮಂಜೂರು ಮಾಡಿಕೊಡುತ್ತೀರಾ ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅದು ಬೇರೆ ಪ್ರಶ್ನೆ. ಪತ್ರದಲ್ಲಿ ಏನಿದೆ ಎನ್ನುವುದನ್ನು ನೋಡಿ, ಪರಿಶೀಲಿಸಿ, ಸಾಧ್ಯವಾದರೆ ಕೊಡಿಸಿಕೊಡೋಣ.

Construction of Government Buildings in Sandur Taluk

346 SRI C. RUDRAPPA (Sandur).—Will the Chief Minister be pleased to state:—

(a) whether it is a fact that construction of the following Buildings in Sandur were included in the Budget of the year 1978.—

(1) Taluk Office building Sandur.

(2) Police Station and Circle Inspector Quarters in Sandur.

(3) Construction of Staff Quarters for the fire station at Sandur.

(4) Construction of Staff Quarters for Government Hospitals, Sandur;

(b) if so, whether administrative sanction has been accorded for starting up the above works ?

(c) if not the reasons for delay in according administrative sanction;

SRI. R. GUNDU RAO (Chief Minister).—

(a) No.

(b) Does not arise.

(c) Does not arise

ಶ್ರೀ ಸಿ. ರುದ್ರಪ್ಪ.—ಸ್ವಾಮಿ, ಪೋಲೀಸ್ ಠಾಣೆ ಮತ್ತು ಸಿಬ್ಬಂದಿಗೆ ವಸತಿ ನಿಲಯಗಳನ್ನು ಸಂಡೂರಿನಲ್ಲಿ ಕಟ್ಟಲು ೧೯೭೭ನೇ ಆಯವ್ಯಯದಲ್ಲಿ ಸೇರಿಸಲಾಗಿತ್ತು. ಆದರೆ, ಕಳೆದ ನಾಲ್ಕು ವರ್ಷ ಗಳಿಂದ ಅದನ್ನು ಆಯವ್ಯಯದಲ್ಲಿ ಸೇರಿಸಿಲ್ಲ. ಆದರೂ ಒಂದು ಸಂತೋಷದ ಸಂಗತಿ ಎಂದರೆ, ೧೯೮೦-೮೧ರ ಆಯವ್ಯಯದಲ್ಲಿ ಪೋಲೀಸ್ ಸಿಬ್ಬಂದಿಗೆ ವಸತಿನಿಲಯ ಮತ್ತು ಅಗ್ನಿಶಾಮಕದಳದ ಕಟ್ಟಡ ಗಳಿಗೆ ಹಣ ಒದಗಿಸಿದ್ದು, ನಿರ್ಮಾಣ ಕೆಲಸ ಪ್ರಾರಂಭ ಮಾಡಿ ಈಗ ಪೂರ್ಣಗೊಳ್ಳುವ ಹಂತಕ್ಕೆ ಬಂದಿವೆ. ಈಗ ಸರ್ಕಾರಿ ಆಸ್ಪತ್ರೆಯ ಸಿಬ್ಬಂದಿ ವರ್ಗಕ್ಕೆ ಮತ್ತು ಪೋಲೀಸ್ ಠಾಣೆಗೆ ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿಯವರಿಗೆ ವಸತಿ ನಿಲಯಗಳನ್ನು ಕಟ್ಟಿಸಿ, ಅನುಕೂಲ ಮಾಡಿಕೊಡುವರೆ ?

ಶ್ರೀ ಆರ್. ಗುಂಡೂರಾವ್.— ವಿಚಾರ ಮಾಡುತ್ತೇನೆ.

Abolition of octroi duty in the State

463 SRI M. CHANDRASEKHAR (Jayanagar).—Will the Minister for Housing and Urban Development be pleased to state.—

(a) the amount of grant given in 1979-80 to the Bangalore City Corporation towards the compensation for the loss of income from the abolition of octroi duty in the State ;

(b) the amount paid to the Bangalore City Corporation upto 31st March 1980 towards this grant;

(c) the grant given for the year 1980-81 on this account;

(d) the amount given to the Corporation till 31st December 1980

SRI DHARAMSINGH NARAYANSINGH (Minister for Housing andUrban Development).—

(a) Rs. 11,35,31,800.

(b) Rs. 11,35,31,800.

(c) So far an amount of Rs. 8,48,30,100 has been released to Bangalore City Corporation for the three quarter 1st April 1980 to 31st December 1980.

(d) Rs. 5,65,71,580

ಶ್ರೀ ಎಂ. ಚಂದ್ರಶೇಖರ್.—೧೯೮೦ರ ಡಿಸೆಂಬರ್ ರವರೆಗೆ ಸರ್ಕಾರ ೮,೪೮,೩೦,೧೦೦ ರೂಪಾಯಿಗಳನ್ನು ಅನುದಾನವಾಗಿ ನಗರಸಭೆಗೆ ಕೊಟ್ಟಿದ್ದರೆ ನಗರಸಭೆಯವರು ಡಿಸೆಂಬರ್‌ವರೆಗೆ ೫,೬೫,೭೧,೫೮೦ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ. ಇದಕ್ಕೆ ಕಾರಣವೇನು ?

† ಶ್ರೀ ಧರ್ಮಸಿಂಗ್.—೫,೬೫,೭೧,೫೮೦ ರೂಪಾಯಿಗಳನ್ನು ಯಾವಾಗ ಬಿಡುಗಡೆ ಮಾಡಬೇಕಾಗಿತ್ತು. ಅದನ್ನು ಮೊದಲೇ ಕೂಡಿಸಿಕೊಂಡು ಮಾಡಲಾಗಿದೆ. up-to-date ಮಾಹಿತಿ ಪ್ರಕಾರ ನಗರಸಭೆಗೆ ಎಷ್ಟು ಅನುದಾನ ನೀಡಬೇಕಾಗಿತ್ತೋ ಅಷ್ಟನ್ನೂ ಸರ್ಕಾರ ಬಿಡುಗಡೆ ಮಾಡಿದೆ.

ಶ್ರೀ ಎಂ. ಚಂದ್ರಶೇಖರ್.—೧೯೭೯-೮೦ರಲ್ಲಿ ಆಕ್ಟ್ರಾಯ್‌ಗೆ ಪರಿಹಾರವಾಗಿ ೧೧,೩೫,೩೧,೮೦೦ ರೂಪಾಯಿಗಳನ್ನು ಕೊಡಲಾಗಿದೆ. ತಮಗೆ ಗೊತ್ತಿರುವ ಹಾಗೆ ಆಕ್ಟ್ರಾಯ್ ತೆರಿಗೆಯಿಂದ ಬರುತ್ತಿದ್ದ ಆದಾಯ ಪ್ರತಿ ವರ್ಷ ಹೆಚ್ಚಾಗುತ್ತಿತ್ತು. ಅದಕ್ಕನುಗುಣವಾಗಿ ಪರಿಹಾರವನ್ನೂ ಈ ವರ್ಷದ ಕೊನೆಯವರೆಗೆ ಎಷ್ಟು ಅನುದಾನವಾಗಿ ಬಿಡುಗಡೆ ಮಾಡಲಾಗಿದೆ.

ಶ್ರೀ ಧರ್ಮಸಿಂಗ್.—ಆಕ್ಟ್ರಾಯ್ ರದ್ದಾದುದನ್ನು ಗಮನದಲ್ಲಿಟ್ಟುಕೊಂಡು ಹಣವನ್ನು ನಾವು ಬಿಡುಗಡೆ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಆಕ್ಟ್ರಾಯ್ ತೆರಿಗೆಯಿಂದ ಬರುತ್ತಿದ್ದ ಆದಾಯ ಪ್ರತಿ ವರ್ಷ ಹೆಚ್ಚಾಗುತ್ತಿತ್ತು. ಆಂತೆಯೇ, ಶೇಕಡ ೧೦ರಷ್ಟು ಹೆಚ್ಚಳವನ್ನು ಇಟ್ಟುಕೊಂಡು, ಸರ್ಕಾರ ಪರಿಶೀಲನೆ ಮಾಡುತ್ತಿದೆ. ಆದರೂ ಕೂಡ, ಯಾವ ಆಧಾರದ ಮೇಲೆ ಇದನ್ನೆ ಕೊಡಬೇಕೆಂಬ ಬಗ್ಗೆ ನಮಗಿನ್ನೂ ಎಲ್ಲಾ ಮುನಿಸಿಪಾಲಿಟಿಗಳಿಂದಲೂ ವಿವರವಾದ ತಃಖ್ತೆಗಳು ಬಂದಿಲ್ಲ. ೧೯೮೦-೮೧ನೇ ಸಾಲಿಗೆ ಸುಮಾರು ೧೫ ಕೋಟಿಗಳಷ್ಟು ಆಕ್ಟ್ರಾಯ್ ಸಂಗ್ರಹವಾಗಬಹುದಿತ್ತು ಎನ್ನುವ ಅಂದಾಜು ಇದೆ. ಇದನ್ನು ಹಣಕಾಸು ಇಲಾಖೆಯವರು ಪರಿಶೀಲನೆ ಮಾಡುತ್ತಿದ್ದಾರೆ. ಅದರಂತೆ ಕೊಡುತ್ತೇವೆ.

ಶ್ರೀ ಎಂ. ಚಂದ್ರಶೇಖರ್.—ಹಾಗಿದ್ದರೆ, ಇನ್ನುಳಿದ ೮,೦೦,೦೦,೦೦೦ ರೂಪಾಯಿಗಳ ಕೆಲಸವನ್ನು ನಗರಸಭೆಯವರೇ ಇನ್ನು ಮೂರು ತಿಂಗಳಲ್ಲಿ ಖರ್ಚು ಮಾಡುವುದಕ್ಕೆ ಸಾಧ್ಯವೆ ? ಆದುದರಿಂದ, ಈಗಿರುವ ಪರಿಪಾಠದ ಬದಲು ತ್ರೈಮಾಸಿಕ ಅನುದಾನವನ್ನು ಮೂರು ತಿಂಗಳ ಮೊದಲೇ ನಗರಸಭೆಯವರಿಗೆ ಕೊಟ್ಟರೆ, ಅದನ್ನು ಖರ್ಚು ಮಾಡುವುದಕ್ಕೆ ಅನುಕೂಲವಾಗುತ್ತದೆ. ಅದು ಬಿಟ್ಟು, ಮೂರು ತಿಂಗಳಾದ ಮೇಲೆ ಕೊಟ್ಟರೆ ಅದನ್ನು ಸರಿಯಾಗಿ ವೆಚ್ಚ ಮಾಡುವುದಕ್ಕಾಗುವುದಿಲ್ಲ.

ಶ್ರೀ ಧರ್ಮಸಿಂಗ್.—ನಗರಸಭೆಯಲ್ಲಿರುವ ಹಣ ಲ್ಯಾಪ್ಸ್ ಆಗುವುದಿಲ್ಲ. ಆಕ್ಟ್ರಾಯ್‌ಗೆ ಪರಿಹಾರವಾಗಿ ಕೊಡುವ ತ್ರೈಮಾಸಿಕ ಅನುದಾನವನ್ನು ಮೂರು ತಿಂಗಳು ಮುಗಿದ ಮೇಲೆ ಕೊಡುವುದರಿಂದ ಅನಾನುಕೂಲವಾಗುತ್ತದೆನ್ನುವ ಅಭಿಪ್ರಾಯವಿದೆ, ಅದನ್ನು ನಾವು ಗಮನದಲ್ಲಿಟ್ಟುಕೊಂಡಿದ್ದೇವೆ.

ಆಕ್ಟ್ರಾಯ್‌ಗೆ ನೀಡುವ ಪರಿಹಾರವನ್ನು ಬಹಳ ತೀವ್ರವಾಗಿ ಕೊಡಬೇಕೆಂಬುದನ್ನು ಮಾನ್ಯ ಅರ್ಥ ಮಂತ್ರಿಗಳ ಗಮನಕ್ಕೆ ತರಲಾಗಿದೆ. ಅದನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್. ಎಲ್ ತಿಮ್ಮೇಗೌಡ.— ಆಕ್ಟ್ರಾಯಿನಿಂದ ಪ್ರತಿ ದಿವಸ ನಗರ ಸಭೆಗೆ ವರಮಾನ ಬರುತ್ತಿತ್ತು. ಈಗ ಅದರ ಪರಿಹಾರ ಧನವನ್ನು ಮೂರು ತಿಂಗಳಾದ ಮೇಲೆ ಕೊಟ್ಟರೆ, ಆ ಮೂರು ತಿಂಗಳಲ್ಲಿ ಖರ್ಚು ಮಾಡುವುದಕ್ಕೆ ನಗರಸಭೆಯಲ್ಲಿ ದುಡ್ಡು ಇಲ್ಲದಿದ್ದರೆ ಅವರಿಗೆ ಬಹಳ ಕಷ್ಟವಾಗುತ್ತದೆ. ಆದಂದರಿಂದ ಮಾನ್ಯ ಚಂದ್ರಶೇಖರ್‌ಅವರು ಹೇಳಿದ ಹಾಗೆ ತ್ರೈಮಾಸಿಕವಾಗಿ ಕೊಡುವ ಅನುದಾನವನ್ನು ಮುಂಗಡವಾಗಿಯೇ ಕೊಡುವುದು ಒಳ್ಳೆಯದಲ್ಲವೆ?

ಶ್ರೀ ಧರ್ಮಸಿಂಗ್.— ಅದು ಸರ್ಕಾರದ ಗಮನಕ್ಕೆ ಬಂದಿದೆ. ತೊಂದರೆಯಾಗದ ರೀತಿಯಲ್ಲಿ ನೋಡಿಕೊಂಡು ಹೋಗುತ್ತಿದ್ದೇವೆ.

Maharashtra-Karnataka-Kerala border dispute.

512 SRI B. B. SAYANAK (Belgaum).—Will the Chief Minister be pleased to state.—

(a) whether it is a fact that Meharashtra-Karnataka-Kerala border dispute is pending for the last 24 years ;

(b) whether it is a fact that Karnataka Government is going to file a case in the Suprene Court for Kasargod isssue ;

(c) if so, when ;

(d) whether Chief Minister of Karnataka and Maharashtra have discussed Maharashra-Karnataka border dispute and when ?

SRI R. GUNDU RAO (Chief Minister). —

(a) Yes.

(b) No, the matter is still under consideration of the parliament and the Government of India. A stage has not been reached at which the State Government need consider the question of filing a case in the Supreme Court.

(c) This question does not arise in the light of the answer to Clause-2.

(d) Not in the recent past ; they have however decided to do so at an early date.

SRI B. B. SAYANAK.—Sir, whether it is a fact that the Prime Minister of India had placed the Mahajan Committee Report on the table of the Lok Sabha on 18th December 1970 ?

SRI R. GUNDU RAO.—Yes, It was placed on the table of the House.

SRI B. B. SAYANAK.—Whether any discussion has taken place in the Lok Sabha?